

ವೀಣಾ ಶ್ರೀನಿವಾಸ್





ಕಾವಿ ಕಲೆಯ ಬಗ್ಗೆ ಸಂಪೂರ್ಣ ವಿವರಣೆಯು ಹೊನ್ನಾವರದ ಕೃಷ್ಣಾನಂದ ಕಾಮತ್ ಅವರ ಕಾವಿ ಕಲೆ ಪುಸ್ತಕದಲ್ಲಿ ಸಿಗುತ್ತದೆ. ಆದರೆ ಇವತ್ತಿನ ಕಾಲಘಟ್ಟದಲ್ಲಿ ಈ ರೀತಿ ಮಾಡುವುದು ಕಷ್ಟ. ಈ ಪ್ರಾಚೀನ ಕಲೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ವೀಣಾ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಇವರು ಕಾವಿ ಕಲೆಯನ್ನು ಕ್ಯಾನ್ವಾಸ್ ಮೇಲೆ ಅಕ್ರಲಿಕ್ ಬಳಸಿ ಕಾಗದದ ಮೇಲೆ ಜಲವರ್ಣವನ್ನು ಬಳಸಿ ವಿಭಿನ್ನ ರೀತಿಯ ಕಲಾ ಪ್ರಕಾರಗಳನ್ನು ಮಾಡುತ್ತಿರುವುದು ವಿಶೇಷ. ಈ ರೀತಿಯಾಗಿ ಮಾಡುವುದು ತುಂಬಾ ಸುಲಭ.

ವೀಣಾ ಶ್ರೀನಿವಾಸ್ ಅವರು ಕಾವಿ ಕಲೆಯಲ್ಲಿ ಸೂರ್ಯಮಂಡಲ, ದಶಾವತಾರ, ಚಂದ್ರಮಂಡಲ, ಸಪ್ತಮಾತ್ರಿಕ, ನಾಟ್ಯಗಣೇಶ, ರಣಪಥ, ಮೂಷಿಕವಾಹನ ಗಣಪ, ಚಂಡಿಕಾ ಹೀಗೆ ವಿಭಿನ್ನ ರೀತಿಯ ಕಾವಿ ಕಲೆಯನ್ನು ಮಾಡಿ ಕಲಾಸಕ್ತರ ಮಡಿಲಿಗೆ ಅರ್ಪಿಸಿದ್ದಾರೆ. ಕಲೆಯನ್ನು ಉಳಿಸುವ ನಿಟ್ಟಿನಲ್ಲಿ ಇವರು ರಾಜ್ಯ ಮತ್ತು ದೇಶದ ವಿವಿಧ ಭಾಗದಲ್ಲಿ ಕಾರ್ಯಾಗಾರ ಮತ್ತು ಪ್ರದರ್ಶನವನ್ನು ಏರ್ಪಡಿಸಿದ್ದಾರೆ. ಇವರ ಕಲಾ ಪ್ರತಿಭೆಯನ್ನು ಗುರುತಿಸಿ ಹಲವಾರು ಸಂಘ ಸಂಸ್ಥೆಗಳಿಂದ ಸನ್ಮಾನಿಸಲ್ಪಟ್ಟಿದ್ದಾರೆ.

ಇತ್ತೀಚೆಗೆ ಮಣಿಪಾಲದಲ್ಲಿ ನಡೆದ ಇವರ ಕಲಾಪ್ರದರ್ಶನ ಬಹಳ ಅದ್ಭುತ ಯಶಸ್ಸನ್ನು ಗಳಿಸಿದೆ. 'ಪ್ರಾಚೀನ ಕಲಾ ಪ್ರಕಾರಗಳಲ್ಲಿ ಒಂದಾದ ಕಾವಿ ಕಲೆಯು ಜನಮಾನಸದಿಂದ ದೂರ ಸರಿಯುತ್ತಿದೆಯೇನೋ ಎಂಬ ಆತಂಕವಾಗುತ್ತಿದೆ. ಈ ನಿಟ್ಟಿನಲ್ಲಿ ಜಾಗೃತಗೊಂಡು ಈ ಅಪರೂಪದ ಕಲೆಯನ್ನು ಉಳಿಸುವತ್ತ ಶ್ರಮಿಸುತ್ತಿದ್ದೇನೆ. ಇಂತಹ ಕಲೆಯು ಯಾವಾಗಲೂ ಮನಸ್ಸಿನ ಪುಟದಲ್ಲಿ ಚಿರಸ್ಥಾಯಿಯಾಗಿರಬೇಕು' ಎಂದು ಹೇಳುತ್ತಾರೆ ವೀಣಾ ಶ್ರೀನಿವಾಸ್.